
ಮದರಾಸ್ ವಿಧಾನಸಭೆಗೆ ಶಾಸಕರಾಗಿ ಆಯ್ಕೆಯಾದ ಬೊಮ್ಮಣ್ಣ, ಹೋಟೆಲ್ ಕಟ್ಟದ 'ದಾಸಪ್ರಕಾಶ್' ಹೋಟೆಲಿನ ಸೀತಾರಾಮರಾವ್, ಬ್ರಿಟಿಷರಿಗೆ ಕನ್ನಡ ಕಲಿಸುವ ಕಾಯಕ ಮಾಡಿದ ಯಲ್ಲಪ್ಪ ರೈಟರ್, ಅವಧೂತ ಗುರುಲಿಂಗಪ್ಪಸ್ವಾಮಿ ಮೊದಲಾದ ಕನ್ನಡಿಗ ಸಾಧಕರ ವ್ಯಕ್ತಿಚಿತ್ರಗಳ ಅಧ್ಯಾಯವು ಮಹತ್ವದ್ದಾಗಿದೆ. 'ಕೋಡೆಮಳೆ' ಕಾದಂಬರಿಯೂ ವ್ಯಕ್ತಿಚಿತ್ರಗಳ ಸಂಪುಟವೇ. ಇದರ ಮುನ್ನುಡಿಯಲ್ಲಿ ಲೇಖಕರು ಇಲ್ಲಿನ ಜನರ ಬಗ್ಗೆ ಹೇಳುತ್ತ – "ಇವರು ವಿದ್ಯಾವಂತರಲ್ಲ. ಜಗತ್ತಿನ ಇತಿಹಾಸ, ಸಾಹಿತ್ಯ ಮತ್ತು ತತ್ವಶಾಸ್ತ್ರಗಳ ಬಗ್ಗೆ ಕೇಳಿ ತಿಳಿದವರಲ್ಲ. ದುಡಿಮೆಯ ಜೊತೆಗೇ ಜಗತ್ತಿನ ವಿದ್ಯಮಾನಗಳನ್ನು ಗ್ರಹಿಸಿದವರು. ಜಗತ್ತಿನ ಆಗುಹೋಗುಗಳ ಕುರಿತು ತಮ್ಮದೇ ರೀತಿಯಲ್ಲಿ ಪ್ರತಿಕ್ರಿಯಿಸಿದವರು" ಎಂದು ವ್ಯಾಖ್ಯಾನಿದ್ದಾರೆ. ಅಜ್ಞಾತವಾಗಿದ್ದು ಧೀಮಂತವಾಗಿ ಬದುಕುವ ಸಾಮಾನ್ಯ ಜನರ ಬಗೆಗಿನ ಆಸಕ್ತಿಯೇ ಪರಂಜ್ಯೋತಿಯವರ ಬರೆಹವನ್ನು ರೂಪಿಸಿದೆ.

'ಮಂಜಿನೆಡೆಯ ಚಿತ್ರಗಳು' ಕೃತಿಯ ಕೊನೆಯ ಭಾಗ, ಲೇಖಕರು ನೀಲಗಿರಿಯನ್ನು ತೊರೆದು ಪತ್ರಕರ್ತರಾಗಿ ಸಂಪಾದಕರಾಗಿ ಫೋಟೊಗ್ರಾಫರಾಗಿ ಪುತ್ತೂರು, ಮದರಾಸು, ಬೆಂಗಳೂರುಗಳಲ್ಲಿ ಕಳೆದ ಬದುಕಿನ




ಚಿತ್ರಗಳನ್ನು ಒಳಗೊಂಡಿದೆ. ಮೊದಲನೆಯದು ಪಶ್ಚಿಮಘಟ್ಟಗಳ ಕಾಡು ಮಳೆ ಚಳಿಗಳ ನಿಸರ್ಗದ ಮಡಿಲಿನ ಚಿತ್ರಗಳಾದರೆ, ಇವು ನಗರ ಬದುಕಿನ ಗಡಿಬಿಡಿ ಬದುಕಿನ ಚಿತ್ರಗಳು. ಇವೆರಡೂ ಘಟ್ಟದ ಬದುಕಿನ ಆಯಾಮಗಳು ಪರಸ್ಪರ ಹೋಲಿಕೆ ಮಾಡಿಕೊಳ್ಳುತ್ತ ಸ್ವಮೌಲ್ಯಮಾಪನ ಮಾಡಿಕೊಳ್ಳುವಂತೆ ಕೃತಿಯಲ್ಲಿ ಮಂಡನೆಯಾಗಿವೆ. ಇವು 'ಇರುವುದನ್ನು ಬಿಟ್ಟು ಇರದುದೆಡೆಗೆ ತುಡಿವ' ಲೇಖಕರ ಅಲೆಮಾರಿ ಮತ್ತು ಹುಡುಕಾಟದ ಬದುಕಿನ ಭಾಗವೂ ಆಗಿವೆ. ಆದರೆ ಈ ಕೃತಿಯಲ್ಲಿ ನೀಲಗಿರಿಯ ಆದಿವಾಸಿಗಳ ಬಗೆಗೆ ಅಡಿಟಪ್ಪಣಿಗಳಂತೆ ಅಲ್ಲಲ್ಲಿ ಬರುವ ಗೆರೆರೂಪದ ಪ್ರಸ್ತಾಪಗಳು ಸೋಜಿಗ ಹುಟ್ಟಿಸುತ್ತವೆ. ಇದು ಆದಿವಾಸಿಗಳನ್ನು ಉಪೇಕ್ಷಿಸಿ ನೋಡುವ ನಾಗರಿಕ ಸಮಾಜದ ಅಥವಾ ಅಧ್ಯಯನದ ವಸ್ತುಗಳಂತೆ ನೋಡುವ ಪಾಶ್ಚಿಮಾತ್ಯ ಮಾನವಶಾಸ್ತ್ರಜ್ಞರ ನಿಲುವಿನ ಫಲವಾಗಿರುವಂತೆ ತೋರುತ್ತದೆ. ಬಹುಶಃ ತಮ್ಮ ಈ ನಿಲುವನ್ನು ಸ್ವವಿಮರ್ಶೆ ಮಾಡಿಕೊಳ್ಳಲೆಂಬಂತೆ, ಪರಂಜ್ಯೋತಿಯವರು ತಮ್ಮ ಜೀವಿತದ ಕೊನೆಯ ಭಾಗದಲ್ಲಿ 'ನೀಲಗಿರಿ: ಸಾಮಾಜಿಕ ಸಾಂಸ್ಕೃತಿಕ ಕಣ್ನೋಟ' ಗ್ರಂಥವನ್ನು ರಚಿಸಿದರು. ಇದು ನೀಲಗಿರಿಯ ಬುಡಕಟ್ಟುಗಳ ಬದುಕನ್ನು ಕುರಿತ ಉಪಯುಕ್ತ ಗ್ರಂಥ. ಇದರ ರಚನೆಗೆ 'ಆದಿವಾಸಿಗಳ ಪ್ರಜ್ಞೆಯ ಮೂಲಕವೇ ಅವರ ಜೀವನವನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು' ಎಂಬ ಬುಡಕಟ್ಟು ಅಧ್ಯಯನಕಾರ ವೆರಿಯರ್ ಎಲ್ವಿನರ ಮಾತು ಪ್ರೇರಕವಾಗಿದೆ ಎಂದು ಲೇಖಕರು ಹೇಳಿಕೊಳ್ಳುವುದುಂಟು. ಈ ಗ್ರಂಥದಲ್ಲಿ ಪರಂಜ್ಯೋತಿಯವರ ಅಪಾರ ಶ್ರಮ ಮತ್ತು ಶ್ರದ್ಧೆಗಳಿವೆ. ಛಾಯಾಚಿತ್ರಕಾರರಾಗಿ ಸ್ವತಃ ತೆಗೆದ ಅಪರೂಪದ ಪಟಗಳಿವೆ. ಆದರೂ ಮಹತ್ವಾಕಾಂಕ್ಷೆಯಿಂದ ರಚಿಸಿದ ಈ ಗ್ರಂಥವು ಆದಿವಾಸಿ ಬದುಕನ್ನು ಹೊರಗೆ ನಿಂತು ನೋಡುವ ನಾಗರಿಕರ 'ಪರಕೀಯ' ದೃಷ್ಟಿಯಿಂದ ಪೂರ್ಣ ಬಿಡುಗಡೆಯಾಗಿಲ್ಲ. ಪಶ್ಚಿಮಘಟ್ಟದ ಅಪರೂಪದ ಪ್ರದೇಶವಾದ ನೀಲಗಿರಿ ಪರಿಸರದ ಮೂಲಚಹರೆ ಅಳಿಸುವಂತೆ ಎಸ್ಟೇಟು, ಅಣೆಕಟ್ಟು ನಗರಗಳು ನಿರ್ಮಾಣವಾಗುವಾಗ ಅಳಿದ ಕಾಡು ಹಾಗೂ ನೆಲೆ ಕಳೆದುಕೊಂಡ ವನ್ಯಜೀವಿಗಳ ಬಗ್ಗೆ ಅಲ್ಲಿ ಕಳವಳವಿಲ್ಲ. ಬುಡಕಟ್ಟುಗಳಿಗೆ ಸೇರಿದ ಕಾಡನ್ನು